

ಚರಂಡಿ ರೂಪ ತಳೆದಿರುವ 'ರಾಯ ಕಾಲುವೆ'



ನಾಗೇನಹಳ್ಳಿಯ ಪಾಳುಬಿದ್ದ ಶಿವಮಂದಿರ



ಜನ ಗುಡಿ ಕಟ್ಟಿ ಪೂಜಿಸಲು ಆರಂಭಿಸುತ್ತಾರೆ. ಈಗಲೂ ಅಲ್ಲಿ ಅನಂತಪದ್ಮನಾಭನ ದೇವಾಲಯವನ್ನು ಕಾಣಬಹುದು.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಕೃಷ್ಣದೇವರಾಯ ದೇವಾಲಯವನ್ನು ಕಟ್ಟಿಸುವುದು 1525ರಲ್ಲಿ, ತಾಳೀಕೋಟೆ ಯುದ್ಧ ನಡೆಯುವುದು 1565ರಲ್ಲಿ. ಹಾಗಾಗಿ ಕಥೆಗೂ ವಾಸ್ತವಕ್ಕೂ ಹೊಂದಾಣಿಕೆಯಾಗುವುದಿಲ್ಲ. ವಿಗ್ರಹಗಳು ಕಣ್ಮರೆಯಾಗಲು ಬೇರೇನೋ ಕಾರಣಗಳಿರಬೇಕು. ಕಥೆ ಏನಾದರೂ ಆಗಿರಲಿ. ಮೃತ್ಯುವಿಗೀಡಾದ ಮಗನ ನೆನಪಿನಲ್ಲಿ ಕೃಷ್ಣದೇವರಾಯ ಅತ್ಯಂತ ದುಃಖ ಹಾಗೂ ಕಾಳಜಿಯಿಂದ ಕಟ್ಟಿಸಿದ ದೇವಾಲಯವನ್ನು ಹೊಕ್ಕರೆ ದುಗುಡವೇ ಆಗುತ್ತದೆ.

## ಬಸವಣ್ಣ ಕಾಲುವೆ

ರಾಯನ ನಿರ್ಮಾಣಗಳಲ್ಲಿ ಈಗಲೂ ಸಾವಿರಾರು ಜನ ಕೃಷಿಕರ ಬಳಕೆಯಲ್ಲಿರುವುದು 'ಬಸವಣ್ಣ ಕಾಲುವೆ'. ಪ್ರಸ್ತುತ ತುಂಗಭದ್ರಾ ಜಲಾಶಯ ಇರುವ ಮುನಿರಾಬಾದ್‌ನಿಂದ 12 ಮೈಲಿ ಮೇಲ್ಭಾಗದಲ್ಲಿದ್ದ ಕೋರಗಲ್ ಎಂಬ ಸ್ಥಳದಲ್ಲಿ 1521ರಲ್ಲಿ ತುಂಗಭದ್ರಾ ನದಿಗೆ ಈ ಅಣೆಕಟ್ಟು ನಿರ್ಮಿಸಿದ. ಅಣೆಕಟ್ಟೆಯಿಂದ ನೀರು ಹರಿಸಲು ಬಸವಣ್ಣ ಹೆಸರಿನ ಕಾಲುವೆ ತೋಡಲಾಯ್ತು. ಕಾಲುವೆಯು ಹೊಸಪೇಟೆಯ ಅಮರಾವತಿವರೆಗೂ ಇತ್ತು. ನಂತರದ ವರ್ಷಗಳಲ್ಲಿ ಅದು ವಿಸ್ತಾರಗೊಂಡು ಈಗಿನ ಕಾಮಲಾಪುರದವರೆಗೂ ನೀರು ಹರಿಸುತ್ತಿದೆ.

1960ರಲ್ಲಿ ತುಂಗಭದ್ರಾ ಜಲಾಶಯ ನಿರ್ಮಾಣವಾದಾಗ ಕೋರಗಲ್ ಅಣೆಕಟ್ಟು ಹಿನ್ನೀರಿನಲ್ಲಿ ಮುಳುಗಡೆಯಾಯಿತು. ಆದರೆ ಸಾವಿರಾರು ಎಕರೆಗೆ ನೀರುಣಿಸುವ ಕಾಲುವೆಯನ್ನು ಕಡೆಗಣಿಸಲು ಸಾಧ್ಯವಿರಲಿಲ್ಲ. ಹಾಗಾಗಿ ಜಲಾಶಯದಿಂದಲೇ ನೀರು ಹರಿಸಲಾಗುತ್ತಿದೆ. ಅಮರಾವತಿ ಬಳಿ ನಗರಕ್ಕೆ ಆಗಮಿಸುವ ಕಾಲುವೆ, ದೋಬಿಘಾಟ್ ಮೂಲಕ ಸಾಗಿ, ಮೀರ್ ಅಲಂ ಮತ್ತು ಸರಸ್ವತಿ ಟಾಕೀಸುಗಳ ಮಧ್ಯೆ ಹಾದು ಮುಂದೆ ಹೋಗುತ್ತದೆ. ಹೀಗೆ ಹೊಸಪೇಟೆ ನಗರದ ಮಧ್ಯಭಾಗದಲ್ಲೇ ಹರಿಯುವ ಕಾಲುವೆ ಈಗ ಕೊಳಚೆಮಯ. ಅದರ ಇತಿಹಾಸವನ್ನು ತಿಳಿಸುವ ಒಂದು ಫಲಕವನ್ನೂ ಹಾಕಿಲ್ಲ. ನಗರದಲ್ಲಿ ಹರಿಯುವ ಉಳಿದ ಚರಂಡಿಗಳಂತೆಯೇ ಇದೂ ಒಂದು ಎಂಬಂತಿದೆ. ಹೊಸಪೇಟೆ ದಾಟಿದ ನಂತರ ಈ ಕಾಲುವೆಯು ಸಾವಿರಾರು ಎಕರೆಗೆ ನೀರುಣಿಸುತ್ತದೆ.

## ರಾಯರ ಕೆರೆ

ಕೃಷ್ಣದೇವರಾಯ ಕಟ್ಟಿದ ಹೊಸಪೇಟೆ ಹೆಗ್ಗುರುತುಗಳಲ್ಲಿ ಒಂದಾದ 'ರಾಯ ಕೆರೆ' ಕೊನೆಯುಸಿರು ಎಳೆಯುತ್ತಿರುವುದನ್ನು ನೋಡಿದರೆ ಸಂಕಟವಾಗುತ್ತದೆ. ವಿದೇಶಿ ಪ್ರವಾಸಿಗರಾದ ಡೊಮಿಂಗೋ ಪ್ಯಾಸ್, ಫರ್ನಾವೋ ನ್ಯೂನಿಜ್‌ರಿಂದ ಈ ಕೆರೆ ನಿರ್ಮಾಣದ ಬಗ್ಗೆ ಸುದೀರ್ಘ ವಿವರಣೆ ನೀಡಿದ್ದಾರೆ. 1520–21ರಲ್ಲಿ ಭೇಟಿ ನೀಡಿದ್ದ ಪ್ಯಾಸ್, 'ರಾಜ ಅಲ್ಲಿ ಒಂದು ಕೆರೆ ಕಟ್ಟಿಸಿದ್ದಾನೆ. ನನಗನ್ನಿಸುವಂತೆ ಅದು ಒಂದು ಫಾಲ್ಕನ್ ಗುಂಡಿನಷ್ಟು ಅಗಲವಿದೆ. ಕೆರೆಯಲ್ಲಿ ಎಷ್ಟೊಂದು ಕೆಲಸಗಾರರನ್ನು ನಾನು ಕಂಡೆನೆಂದರೆ ಅವರು ಹದಿನೈದು ಅಥವಾ ಇಪ್ಪತ್ತು ಸಾವಿರವಿದ್ದರು ಅನಿಸುತ್ತದೆ. ಅವರು ಇರುವೆಗಳಂತೆ ಕಾಣುತ್ತಿದ್ದು, ಅವರು ಓಡಾಡುವ ನೆಲವೇ

